ಕರ್ನಾಟಕದಲ್ಲಿ ನೀರಾವರಿ

೧೪೯೯ ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಮಾನ್ಯ ಕಂದಾಯ ಯೋಜನೆ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿ ಶೇಕಡಾವಾರು ನೀರಾವರಿಗೊಳಪಟ್ಟ ಪ್ರದೇಶ ಮತ್ತು ಇದು ರಾಷ್ಟ್ರ ಮಟ್ಟದ ಅಂಕಿಅಂಶಗಳೊಡನೆ ಹೇಗೆ ಹೋಲುತ್ತದೆ ?

ಆ) ಕರ್ನಾಟಕದಲ್ಲಿ ವಿವಿಧ ಮೂಲಗಳಿಂದ ನೀರಾವರಿಗೆ ಒಳಪಡುವ ಅಂತಿಮ ಸಾಮರ್ಥ್ಯ?

ಇ) ಈ ಸಾಮರ್ಥ್ಯ ಸಿದ್ಧಿಯಾಗಬೇಕಾಗುವ ಒಟ್ಟು ಆರ್ಥಿಕ ಮೌಲ್ಯವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೮೨-೮೩ನೇ ಸಾಲಿನಲ್ಲಿ ಕರ್ನಾಟಕದಲ್ಲಿ ನೀರಾವರಿಯಾದ ಕ್ಷೇತ್ರವು ಬಿತ್ತನೆಯಾದ ನಿವ್ವಳ ಕ್ಷೇತ್ರದ ಶೇಕಡ ೩೦ ರಷ್ಟಿತ್ತು. ರಾಷ್ಟ್ರಮಟ್ಟದಲ್ಲಿನ ಈ ಸಂಖ್ಯೆಯು ಶೇಕಡ ೨೮.೨ ರಷ್ಟಿತ್ತು.

ಆ) ಕರ್ನಾಟಕದ ಗರಿಷ್ಠ ನೀರಾವರಿ ಸಾಮರ್ಥ್ಯವು ಮೇಲ್ಮೈ ಜಲದಿಂದಾದ ೪೫ ಲಕ್ಷ ಹೆಕ್ಟೇರುಗಳು ಹಾಗೂ ಭೂಜಲದಿಂದಾದ ೧೦ ಲಕ್ಷ ಹೆಕ್ಟೇರುಗಳು ಸೇರಿದಂತೆ. ಒಟ್ಟು ೫೫ ಲಕ್ಷ ಹೆಕ್ಟೇರುಗಳು.

ಇ) ಈಗ ನಿರ್ಮಾಣಗೊಳ್ಳುತ್ತಿರುವ ಹಾಗೂ ಇನ್ನೂ ಕೈಗೊಳ್ಳಬೇಕಾಗಿರುವ ಎಲ್ಲಾ ಮೇಲ್ಮೈ ನೀರಿನ ನೀರಾವರಿ ಯೋಜನೆಗಳಿಂದ ಪೂರ್ಣ ಗೊಳ್ಳಲು ಸುಮಾರು ೫೫೦೦ ಕೋಟಿ ರೂಪಾಯಿಗಳು ಬೇಕಾಗುವುದು.

ನದಿಗಳಿಂದ ನೀರಿನ ವರ್ಗಾವಣೆ

೧೫೦೦ ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು). — ಮಾನ್ಯ ಕಂದಾಯ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಹಾನದಿ ಮತ್ತು ಗೋದಾವರಿ ನದಿಗಳ ಬಳಸಲಾಗದ ನೀರನ್ನು ಕೃಷ್ಣಾ ಜಲಾನಯನ ಪ್ರದೇಶಕ್ಕೆ ವರ್ಗಾಯಿಸುವ ಪ್ರಸ್ತಾವನೆಯನ್ನು ಭಾರತ ಸರ್ಕಾರ ಮಾಡಿದೆಯೇ ?

ಆ) ಕೃಷ್ಣಾ ಜಲಾನಯನ ಪ್ರದೇಶದ ವಿವಿಧ ರಾಜ್ಯಗಳಲ್ಲಿ, ಎಂದರೆ ಆಂಧ್ರ ಮಹಾರಾಷ್ಟ್ರ ಮತ್ತು ಕರ್ನಾಟಕಗಳಿಗೆ ಒದಗಿಸಲು ಸೂಚಿಸಲಾಗಿರುವ ನೀರಿನ ಪ್ರಮಾಣ ಎಷ್ಟು ?

ಇ) ಈ ನೀರನ್ನು ಉಪಯೋಗಿಸಿಕೊಳ್ಳಲು ಕೆಲವು ಯೋಜನೆಗಳನ್ನು ತಯಾರಿಸಬೇಕೆಂದು ರಾಜ್ಯ ಸರ್ಕಾರಕ್ಕೆ ಸೂಚಿಸಲಾಗಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ, ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಆಂಧ್ರ ೧೦.೫ ಎಂ.ಎ.ಎಫ್.

ಕರ್ನಾಟಕ ೪.೫ ಎಂ.ಎ.ಎಫ್.

ಮಹಾರಾಷ್ಟ್ರ ೪.೫ ಎಂ.ಎ.ಎಫ್.

ಇ) ಈ ಮೇಲಿನ ನೀರನ್ನು ಬಳಕೆ ಮಾಡಲು ಯೋಜನೆಗಳನ್ನು ತಯಾರಿಸಲು ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರವು ಸಲಹೆ ಮಾಡಿದೆ.

ಅಧ್ಯಕ್ಷರು.— ಈಗ ಮಾನ್ಯ ಜಾಲಪ್ಪನವರು ಹೇಳಿಕೆ ಕೊಡಬಹುದು.